# ‘ಚಕ್ನಿ ಚಮೇಲಿ’ಯ ಕುಣಿತ!



2011ರಲ್ಲಿ ‘ಶೀಲಾ ಕಿ ಜವಾನಿ’ ಎಂಬ ಐಟಂ ಸಾಂಗ್ ಮೂಲಕ ಬಾಲಿವುಡ್‌ನಲ್ಲಿ ಸಖತ್ ಸುದ್ದಿ ಮಾಡಿದ ಕತ್ರೀನಾ ಮತ್ತೆ 2012ರ ಆರಂಭದಲ್ಲೇ ಮತ್ತೊಂದು ಭರ್ಜರಿ ಐಟಂ ಸಾಂಗ್ ನೀಡಲು ತಯಾರಾಗಿದ್ದಾಳೆ. ಈ ಸಲ ಕರಣ್ ಜೋಹರ್ ನಿರ್ದೇಶನದ ‘ಅಗ್ನಿಪಥ್’ ಚಿತ್ರಕ್ಕೆ ಕತ್ರೀನಾ ಹೆಜ್ಜೆ ಹಾಕಿದ್ದಾಳೆ. ‘ಚಕ್ನಿ ಚಮೇಲಿ’ ಎಂಬ ಈ ಹಾಡಿನ ರಿಹರ್ಸಲ್‌ನಲ್ಲಿ ಕತ್ರೀನಾಳ ಕುಣಿತದ ಶ್ರದ್ಧೆಯನ್ನು ಗಮನಿಸಿದ ಚಿತ್ರದ ಹೀರೋ ಹೃತಿಕ್ ರೋಶನ್ ಮತ್ತು ‘ವಿಲನ್’ ಸಂಜಯ್ ದತ್ ಇಬ್ಬರೂ ಬೆರಗಾಗಿದ್ದಾರಂತೆ! ‘ನಿಜಕ್ಕೂ ಕತ್ರೀನಾ ಈ ಹಾಡಿಗೆ ತುಂಬ ಕಷ್ಟಪಟ್ಟು ನೃತ್ಯ ಮಾಡಿದ್ದಾಳೆ. ನೃತ್ಯ ನಿರ್ದೇಶಕ ಗಣೇಶ್ ಆಚಾರ್ಯ ಅವರ ಸೂಚನೆಗೆ ತಕ್ಕಂತೆ ಕುಣಿಯಲು ಹಠ ಹಿಡಿದು ಅಭ್ಯಾಸ ಮಾಡಿದ್ದಾಳೆ. ನಾನಂತೂ ದಂಗಾಗಿ ಹೋದೆ’ ಎಂದು ಹೃತಿಕ್ ಹೇಳಿದ್ದಾನೆ.

ಸಂಜಯ್ ದತ್ ಕೂಡಾ ಕತ್ರೀನಾಳನ್ನು ಹೊಗಳಲು ಹಿಂದೆ ಮುಂದೆ ನೋಡಿಲ್ಲ. ‘ಕತ್ರೀನಾ ನಿಜಕ್ಕೂ ಒಳ್ಳೆಯ ಡ್ಯಾನ್ಸರ್. ಆಕೆಗೆ ಕುಣಿತದ ದೇಹ ಭಾಷೆ ಚೆನ್ನಾಗಿ ಗೊತ್ತಿದೆ. ಈ ಹಾಡು ಸೂಪರ್ ಹಿಟ್ ಆಗೋದರಲ್ಲಿ ಸಂಶಯವೇ ಇಲ್ಲ’ ಎನ್ನುವುದು ಸಂಜು ಉವಾಚ.

‘ಇದೇನಿದು.. ಕತ್ರೀನಾ ಬರೇ ಐಟಂ ಸಾಂಗ್‌ಗೇ ಸೀಮಿತ ಆಗುತ್ತಿದ್ದಾಳಾ?’ ಎಂದು ಪತ್ರಕರ್ತರು ಪ್ರಶ್ನಿಸಿದರೆ ಕತ್ರೀನಾ ಅದಕ್ಕೂ ಒಂದು ಕಾರಣ ನೀಡಿದ್ದಾಳೆ. ‘ಕರಣ್ ಜೋಹರ್ ಚಿತ್ರದಲ್ಲಿ ಕೆಲಸ ಮಾಡೋದು ನನಗೆ ತುಂಬ ಖುಷಿಯ ಸಂಗತಿ. ಕರಣ್ ತುಂಬ ಒಳ್ಳೆಯ ಮನುಷ್ಯ. ನನ್ನ ಜತೆಗೆ ಚೆನ್ನಾಗಿದ್ದಾನೆ. ಹಿಂದೆಯೇ ದೋಸ್ತಾನಾ–2 ಸಿನಿಮಾದಲ್ಲಿ ಕೆಲಸ ಮಾಡಬೇಕಿತ್ತು. ಆದರೆ ಆ ಚಿತ್ರದ ಯೋಜನೆ ಮುಂದಕ್ಕೆ ಹೋಗಿದೆ. ಈಗ ಈ ಹಾಡಿನ ನೆಪದಲ್ಲಾದರೂ ಕರಣ್ ಜತೆ ಕೆಲಸ ಮಾಡಿದಂತಾಗಿದೆ. ನಿಜಕ್ಕೂ ಮಸ್ತ್ ಹಾಡು. ಮಜಾ ಅನುಭವ’ ಎಂದು ಕತ್ರೀನಾ ಖುಷಿಯಿಂದ ನುಡಿದಿದ್ದಾಳೆ.

ಅಂದ ಹಾಗೆ, ಈ ಹಾಡಿನಲ್ಲಿ ಹೆಜ್ಜೆ ಹಾಕುವ ಸಲುವಾಗಿಯೇ ಕತ್ರೀನಾ 3 ಕೆ.ಜಿಯಷ್ಟು ದೇಹತೂಕವನ್ನು ಕಡಿಮೆ ಮಾಡಿಕೊಂಡಿದ್ದಾಳಂತೆ. ಈ ಹಾಡಿನ ದೃಶ್ಯದಲ್ಲಿ ಹೃತಿಕ್ ರೋಶನ್ ಇದ್ದರೂ ಆತ ಕುಣಿಯುವುದಿಲ್ಲವಂತೆ. ಅಂದರೆ, ಕತ್ರೀನಾಗೇ ಫುಲ್ ಸ್ಕೋಪ್!



# ಕರೀನಾ ಮದುವೆ

‘ಸೈಫ್ ಅಲಿ ಖಾನ್ ಮತ್ತು ಕರೀನಾ ಕಪೂರ್ 2012ರಲ್ಲಿ ಮದುವೆಯಾಗುವುದು ನಿಜವೆ?’ ಎನ್ನುವುದೀಗ ಬಾಲಿವುಡ್‌ನಲ್ಲಿ ಚರ್ಚೆಯ ವಿಷಯವಾಗಿದೆ. ಕಳೆದ ವಾರ ಪತ್ರಕರ್ತರೊಬ್ಬರು ಮದುವೆ ಬಗ್ಗೆ ಕೇಳಿದಾಗ ಕರೀನಾ ಉಡಾಫೆ ಉತ್ತರ ನೀಡಿದ್ದಳು. ‘ಗೊತ್ತಿಲ್ಲಪ್ಪ. ನನ್ನ ಮದುವೆ 2012ರಲ್ಲಿ ಫಿಕ್ಸ್ ಆಗಿದೆಯಾ? ಯಾರು ಅಂದಿದ್ದು?’ ಎಂದೆಲ್ಲ ಉಲ್ಟಾ ಹೊಡೆದಿದ್ದಾಳೆ. ಆದರೆ ಈ ಇಬ್ಬರೂ ತಾರೆಯರನ್ನು ಸದಾ ಬೆನ್ನಟ್ಟುವ ಫಿಲ್ಮೀ ಜರ್ನಲಿಸ್ಟರ ಪ್ರಕಾರ, 2012ರ ಆರಂಭದಲ್ಲೇ ಅಧಿಕೃತ ಮದುವೆ ಖಂಡಿತಾ!

ಹೀಗೆ ಖಚಿತವಾಗಿ ಹೇಳಲು ಇನ್ನೂ ಒಂದು ಕಾರಣ ಸಿಕ್ಕಿದೆ. ಮೊನ್ನೆ ಕರೀನಾ ಮತ್ತು ಸೈಫ್ ಇಬ್ಬರೂ ಮುಂಬೈ ಬಾಂದ್ರಾದ ಟರ್ನರ್ ರೋಡ್‌ನಲ್ಲಿ ನಿರ್ಮಾಣವಾಗಿದ್ದ ಹೊಸ ಮನೆಯೊಂದನ್ನು ನೋಡಲು ಹೋಗಿದ್ದರಂತೆ. ಇಬ್ಬರೂ ಕೈ ಕೈ ಹಿಡಿದು ಹೊಸ ಮನೆ ನೋಡಿ ಗಹನವಾಗಿ ಚರ್ಚಿಸುತ್ತಾ ಹೊರ ಬಂದರಂತೆ. ‘ಅಂದರೆ ಮದುವೆಯ ಬಳಿಕ ಉಳಿದುಕೊಳ್ಳಲು ಪ್ರತ್ಯೇಕ ಮನೆಗೆ ಹುಡುಕಾಟ ನಡೆದಿದೆ’ ಎನ್ನುವುದು ಪತ್ರಕರ್ತರ ವ್ಯಾಖ್ಯಾನ.

ಸೈಫ್‌ಗೆ ಈಗಾಗಲೆ 40 ದಾಟಿ 41 ನಡೀತಾ ಇದೆ. ಕರೀನಾಗೂ ಮೊನ್ನೆ ಸೆಪ್ಟೆಂಬರ್‌ಗೆ 31 ದಾಟಿದೆ. ಇಬ್ಬರ ವೃತ್ತಿಜೀವನವೂ ಉತ್ತುಂಗಕ್ಕೆ ತಲುಪಿದೆ. ಕರೀನಾ ಅಂತೂ ಎಷ್ಟೊಂದು ವೈವಿಧ್ಯಮಯ ಪಾತ್ರಗಳನ್ನು ಮಾಡಿದ್ದಾಳೆಂದರೆ, ಇನ್ನು ಮಾಡಲು ಮಧ್ಯವಯಸ್ಸಿನ ಪಾತ್ರಗಳಷ್ಟೇ ಉಳಿದಿವೆ. ಹಾಗಾಗಿ ಮದುವೆಗೆ ಇದೇ ಸಕಾಲ ಎಂದು ಇಬ್ಬರೂ ಭಾವಿಸಿದ್ದಾರೆ ಎನ್ನುವುದು ನಿಕಟವರ್ತಿಗಳ ಮಾಹಿತಿ. ಇಬ್ಬರೂ ‘ಲಿವಿಂಗ್ ಟುಗೆದರ್’ ಜೀವನ ನಡೆಸಿ ಈಗಾಗಲೆ ಹಲವು ವರ್ಷಗಳು ಉರುಳಿದ್ದು, ಪರಸ್ಪರರ ನಡುವೆ ಅಂತಹ ಅಪನಂಬಿಕೆಯ ದೊಡ್ಡ ಘಟನೆಗಳೂ ನಡೆದಿಲ್ಲ; ಹಾಗಾಗಿ ಹೊಂದಾಣಿಕೆಯ ಸಮಸ್ಯೆಯೂ ಇಲ್ಲ ಎಂದೂ ಈ ನಿಕಟವರ್ತಿಗಳು ಹೇಳುತ್ತಾರೆ. ಸೈಫ್‌ನ ತಾಯಿ ಶರ್ಮಿಳಾ ಕೂಡಾ ಸೊಸೆಯನ್ನು ಮನೆ ತುಂಬಿಸು ಎಂದು ಒತ್ತಾಯ ಮಾಡುತ್ತಿದ್ದಾಳಂತೆ. ತಂದೆ ಮನ್ಸೂರ್ ಅಲಿ ಖಾನ್ ಪಟೌಡಿ ತೀರಿಕೊಂಡು ವರ್ಷ ಕಳೆದ ಬಳಿಕ ಮದುವೆಯಾದರೆ ಸೂಕ್ತ ಎನ್ನುವುದು ಮನೆಯವರ ಸೂಚನೆಯಂತೆ. ಒಟ್ಟಾರೆ 2012ರಲ್ಲಿ ಮದುವೆ ನಡೆಯುವುದಂತೂ ಖಂಡಿತ ಎನ್ನುವುದು ಎಲ್ಲರ ಅಭಿಮತ.

■ ಬಿಂದು